ದಿನಾಂಕ 17-01-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಸಿ ಆರ್ ಎಸ್ ವಕೀಲರಿಂದಃ-

ಮಾತುಕತೆಗೆ ಸೇರಿದ ದಿವಸ ಕೊಟ್ಟ ಚೆಕ್ಕು ನನ್ನದು ಒಂದು, ಲಕ್ಷ್ಮಿಯವರ ಚೆಕ್ಕು ಒಂದು. ಪ್ರತಿ ಚೆಕ್ಕುಗಳು ತಲಾ 6 ಲಕ್ಷ ರೂಗಳದ್ದು. ಆ ಚೆಕ್ಕುಗಳನ್ನು ಬರೆದದ್ದು ಯಾರು ಎಂದು ನೆನಪಿಲ್ಲ. ಚೆಕ್ಕನ ಮೊತ್ತವನ್ನು ಆ ದಿನವೇ ಬರೆದೆವು, ಚೆಕ್ಕನ ದಿನಾಂಕವನ್ನು ಆ ದಿನವೇ ಬರೆದೆವು. ಮಾತುಕತೆನಯಾದ ಮಾರನೆಯ ಅಥವಾ 2 ದಿವಸದಲ್ಲಿ ಒಪ್ಪಿ ಗೆ ಪತ್ರ ಬರೆದದ್ದು. 2 ಚೆಕ್ಕುಗಳನ್ನು ಗ್ಯಾರೆಂಟಿಗಾಗಿ ಕೊಟ್ಟದ್ದು ಎಂದು ದಾಖಲೆ ಮಾಡಿಕೊಳ್ಳಲು ತೊಂದರೆ ಇತ್ತಾ ಎಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ಓ ಎಸ್ 118/2013 ದಾವೆ ವಾಪಸ್ಸು ತೆಗೆದುಕೊಂಡದ್ದು ಒಪ್ಪಿಗೆ ಪತ್ರದ ಮಾಡಿಕೊಂಡ ನಂತರ ಎಂದರೆ ಸರಿಯಲ್ಲ. ಒಪ್ಪಿ ಗೆ ಪತ್ರ ಮಾತುಕತೆಯಂತೆ ಮಾಡಿರುವ ಪತ್ರದಲ್ಲಿ ಹೇಳಿರುವ ಹಣವನ್ನು ನಾನು ಕೊಟ್ಟಿಲ್ಲ ಆದ್ದರಿಂದ ಅದು ಊರ್ಜಿತ ಅಲ್ಲ ಎಂದರೆ ಸರಿಯಲ್ಲ, ಸಾಕ್ಷಿ 1 ವರೆಲಕ್ಷ ಜಾಸ್ತಿ ಕೊಟ್ಟಿದ್ದೇನೆಂದು ನುಡಿಯುುತ್ತಾರೆ. ಒಪ್ಪಿ ಗೆ ಪತ್ರದಲ್ಲಿ ಸರ್ಕಾರಿ ಬೆಲೆಯನ್ನು ಮಾತ್ರ ನಮೂದು ಮಾಡಿದ್ದು ಹೆಚ್ಚಿಗೆ ಹಣ ಕೊಡಬೇಕಾಗಿದ್ದಕ್ಕೆ 2 ಚೆಕ್ಕುಗಳನ್ನು ಕೊಟ್ಟದ್ದು ಎಂದರೆ ಸರಿಯಲ್ಲ. ಅ ಕಾರಣಕ್ಕಾಗಿಯೇ ಇನ್ನೂ ಯಾಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.